**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.**

**ಸಿ.ಸಿ. ಸಂಖ್ಯೆ:646/2020**

| | |
|---|---|
| ಫ್ರಾಸಾ | 1 |
| ಚಾಸಾ | 1 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 05.07.2025.**

| | | |
|---|---|---|
| ಸಾಕ್ಷಿಯ ಹೆಸರು | : | ದೇವರಾಜು |
| ತಂದೆಯ ಹೆಸರು | : | ವೆಂಕಟರವಣಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ನಿಮ್ಮಕಾಯಲಪಲ್ಲಿ |

**(3 ಮತ್ತು 5 ನೇ ಆರೋಪಿತರು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪತರ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ಚಾಸಾ–2 ನನ್ನ ಹೆಂಡತಿ ಮತ್ತು ಚಾಸಾ–3 ನನ್ನ ಮಗ. ಆರೋಪಿತರು ನಮ್ಮ ಗ್ರಾಮದವರು. 2023 ರಲ್ಲಿ ಬೆಳಿಗ್ಗೆ 7.30 ರ ಸಮಯದಲ್ಲಿ ನಾನು ನನ್ನ ಹೊಲದಲ್ಲಿ ಕಳೆ ಹೊಡೆಯುತ್ತಿದ್ದಾಗ, ಸುಬ್ಬಿರೆಡ್ಡಿ, ಬಾಲಾಜಿರೆಡ್ಡಿ, ಸುಧಾಕರ, ಮಂಜು ಹಾಗೂ ಸುನಿಲ್ ರವರು ನಮ್ಮ ಹೊಲದ ಬಳಿಗೆ ಬಂದು, ನನಗೆ ಹಲ್ಲೆ ಮಾಡಿದರು. ಬಾಲಾಜಿರೆಡ್ಡಿ ಹಾಗೂ ಆತನ ತಮ್ಮ ಕಲ್ಲಿನಿಂದ ನನ್ನ ತಲೆಗೆ ಹೊಡೆದರು. ಯಾರು ಯಾವ ಆಯುಧದಿಂದ ನನಗೆ

ಹಲ್ಲೆ ಮಾಡಿದರು ಎಂದು ಹೇಳಲಾಗುವುದಿಲ್ಲ. ನಂತರ ನಾನು ಚೇಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ ನನ್ನ ತಲೆಗೆ ಹೊಲಿಗೆ ಹಾಕಿದರು. ಪೋಲಿಸರು ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದು ಸಹಿ ಪಡೆದರು.

ಈ ಹಂತದಲ್ಲಿ ಸಾಕ್ಷಿಗೆ ಹೇಳಿಕೆಯ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆಯ ಪ್ರತಿಯನ್ನು **ನಿಪಿ-1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು.

ನಂತರ ಮಾರನೆಯ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಕೇಸನ್ನು ಬರೆದುಕೊಂಡು, ಕಲ್ಲನ್ನು ವಶಪಡಿಸಿಕೊಂಡರು ಎಂದು ನುಡಿಯುತ್ತಾರೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ದಿನಾಂಕ 23.07.2020 ರಂದು ಬೆಳಿಗ್ಗೆ 10.00 ಗಂಟೆಯ ಸಮಯದಲ್ಲಿ ಸ.ನಂ.6 ರಲ್ಲಿ ನಾನು ಚಾಸಾ-4 ಮತ್ತು 5 ರವರು ಕಡಲೆ ಕಾಯಿ ಬೆಳೆಗೆ ಗುಟುವಾ ಹಾಕುತ್ತಿದ್ದಾಗ, ಆರೋಪಿತರು ಸಮಾನ ಉದ್ದೇಶದಿಂದ ನನ್ನ ಜಮೀನಿನ ಒಳಗೆ ಅಕ್ರಮ ಪ್ರವೇಶ ಮಾಡಿ ಚಾಸಾ-4 ಮತ್ತು 5 ರವರನ್ನು ಏಕೆ ಜಮೀನಿನ ಒಳಗೆ ಬರಮಾಡಿಕೊಂಡಿದ್ದೀರಿ ಎಂದು ಜಗಳ ತೆಗೆದರು ಎಂದರೆ ಸರಿ. ಆ ಪೈಕಿ 2 ನೇ ಆರೋಪಿಯು ಈಗ ತೋರಿಸಿದ ಕಲ್ಲಿನಿಂದ ನನ್ನ ತಲೆಯ ಮೇಲ್ಭಾಗಕ್ಕೆ ಹೊಡೆದು ರಕ್ತಗಾಯಮಾಡಿದರು ಎಂದರೆ ಸರಿ. 1 ನೇ ಆರೋಪಿಯು ಕಲ್ಲಿನಿಂದ ನನ್ನ ಎಡಗಾಲಿನ ತೊಡೆಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿ. 3 ನೇ ಆರೋಪಿಯು ಕೈ

ಉಗುರುಗಳಿಂದ ನನ್ನ ಹೊಟ್ಟೆಯ ಬಲಭಾಗಕ್ಕೆ ಪರಚಿದರು ಎಂದರೆ ಸರಿ. 5 ನೇ ಆರೋಪಿಯು ನನ್ನ ಕೊರಳ ಪಟ್ಟಿ ಹಿಡಿದು ಎಳೆದಾಡಿದರು ಎಂದರೆ ಸರಿ. 6 ಮತ್ತು 8 ನೇ ಆರೋಪಿತರು ನನ್ನ ಬೆನ್ನಿನ ಹಿಂಭಾಗಕ್ಕೆ ಹೊಡೆದರು ಎಂದರೆ ಸರಿ. 3 ನೇ ಆರೋಪಿಯು ನನಗೆ ಕಾಲುಗಳಿಂದ ಒದ್ದು, ಕೈಗಳಿಂದ ಹೊಡೆದರು ಎಂದರೆ ಸರಿ. 2 ನೇ ಆರೋಪಿಯು ನನಗೆ ಕಾಲಿನಿಂದ ಒದೆಯುವಾಗ, ಚಾಸಾ-2 ಮತ್ತು 3 ರವರು ಜಗಳ ಬಿಡಿಸಲು ಬಂದಿದ್ದು, ಅಗ ಚಾಸಾ-2 ಮತ್ತು 3 ರವರಿಗೆ ಆರೋಪಿತರೆಲ್ಲರೂ ಅವಾಚ್ಯ ಶಬ್ಧಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ಪೋಲಿಸರು ನನ್ನ ಮರುಹೇಳಿಕೆ ಪಡೆದರು ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದಲ್ಲಿರುವ ಒಂದು ಇಟ್ಟಿಗೆ ಚೂರು ಮತ್ತು ಹಿಡಿಗಾತ್ರದ ನಾಲ್ಕು ಕಲ್ಲುಗಳನ್ನು ನೋಡಿ ಸದರಿ ಕಲ್ಲು ಮತ್ತು ಇಟ್ಟಿಗೆಗಳಿಂದ ಆರೋಪಿತರು ನನಗೆ ಹಲ್ಲೆ ಮಾಡಿದರು ಎಂದು ನುಡಿದಿದ್ದು, ಅವುಗಳನ್ನು ಕ್ರಮವಾಗಿ **ಮುದ್ದೆಮಾಲು-1 ರಿಂದ 5** ಒಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಸಿ.ವಿ.ಎನ್. ವಕೀಲರಿಂದ, ಆರೋಪಿತರ ಪರವಾಗಿಃ**

ಆರೋಪಿಗಳು ಹಾಗೂ ನಾವು ದಾಯಾದಿಗಳು ಎಂದರೆ ಸರಿ. ನಮ್ಮ ಹಾಗೂ ಆರೋಪಿಗಳ ಜಮೀನುಗಳು ಅಕ್ಕಪಕ್ಕದಲ್ಲಿವೆ ಎಂದರೆ ಸರಿ. ನೀರಿನ ಶೆಡ್ಡು ನಿರ್ಮಿಸಲು ತೋಟಗಾರಿಕೆ ಇಲಾಖೆಯಿಂದ ನಾನು ಅನುದಾನ ಪಡೆದಿದ್ದು, ನಾನು ಆರೋಪಿತರ ಸ್ವತ್ತನ್ನು ಒತ್ತುವರಿ ಮಾಡಿ ಮಣ್ಣನ್ನು ತೆಗೆದಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತೋಟಗಾರಿಕೆ ಇಲಾಖೆಗೆ ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ.

ಈ ಮುಂಚೆ ಆರೋಪಿತರು ನನ್ನ ವಿರುದ್ಧ ಒಂದು ಪ್ರಕರಣ ಸಲ್ಲಿಸಿದ್ದರು ಎಂದರೆ ಸರಿ. ಆ ಪ್ರಕರಣ ಮುಕ್ತಾಯಗೊಂಡಿದೆ ಎಂದರೆ ಸರಿ. ನಾನು ಆರೋಪಿತರ ಮೇಲಿನ ದ್ವೇಷದಿಂದಾಗಿ ಈ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿರುವುದಿಲ್ಲ, ನಾನು ಆರೋಪಿತರಿಗೆ ಹಲ್ಲೆ ಮಾಡಿದ್ದು, ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಜಮೀನು ವಿಚಾರವಾಗಿ ಆರೋಪಿತರು ಹಾಗೂ ನಮ್ಮ ನಡುವೆ ವಿವಾದಗಳಿವೆ ಎಂದರೆ ಸರಿ. ಆ ಒಂದು ಕಾರಣದಿಂದಾಗಿ ಆರೋಪಿತರ ವಿರುದ್ಧ ಈ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಮುದ್ದೆಮಾಲುಗಳಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ನಾನೇ ಪೋಲಿಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ದಿನ ಬಾಲಾಜಿರೆಡ್ಡಿರವರು ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಅಣ್ಣ ಮತ್ತು ಮಂಜುಳಮ್ಮ ಸೇರಿ ಆರೋಪಿತರ ಮೇಲೆ ಸುಳ್ಳು ದೂರು ನೀಡಿ, ಅವರಿಗೆ ಮಾನಸಿಕ ಹಿಂಸೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮನ್ನು ಯಾರೂ ಸಹ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.